ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 180 |
| ಉತ್ತರಿಸುವ ಸಚಿವರು | : | ಮಾನ್ಯ ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 14-12-2021 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಸ್ಥಾಪಿಸಲಾಗಿರುವ ಜವಳಿ ಪಾರ್ಕ್ ಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ರಾಜ್ಯ ಸರ್ಕಾರ ಒಡೆತನದ ಮತ್ತು ಖಾಸಗಿ ಒಡೆತನದ ಪಾರ್ಕ್ ಗಳು ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು). | ರಾಜ್ಯದಲ್ಲಿ ಪ್ರಸ್ತುತ ಸ್ಥಾಪಿಸಲಾಗಿರುವ ಜವಳಿ ಪಾರ್ಕ್‌ಗಳ ಸಂಖ್ಯೆ 04<br><br>ಕೇಂದ್ರ ಸರ್ಕಾರದ ಸ್ಕೀಮ್ ಫಾರ್ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ (SITP) ಯೋಜನೆಯಡಿಯಲ್ಲಿ 02 ಜವಳಿ ಪಾರ್ಕ್‌ಗಳು, ರಾಜ್ಯ ಸರ್ಕಾರದ ನೂತನ ಜವಳಿ ನೀತಿ 2013-18ರಡಿಯಲ್ಲಿ ಗ್ರೀನ್‌ಫೀಲ್ಡ್ ಟೆಕ್ಸ್‌ಟೈಲ್ ಪಾರ್ಕ್ ಕಾರ್ಯಕ್ರಮದಲ್ಲಿ 02 ಜವಳಿ ಪಾರ್ಕ್‌ಗಳು.<br><br>1) **ದೊಡ್ಡಬಳ್ಳಾಪುರ ಇಂಟಗ್ರೇಟೆಡ್ ಟೆಕ್ಸ್ ಟೈಲ್ ಪಾರ್ಕ್**(Scheme for Integrated Textile Park):-<br>ಈ ಜವಳಿ ಪಾರ್ಕ್ ಅನ್ನು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದಲ್ಲಿ 46.50 ಎಕರೆ ವಿಸ್ತೀರ್ಣದಲ್ಲಿ ರೂ.9210.00 ಲಕ್ಷಗಳ ಬಂಡವಾಳ ಹೂಡಿಕೆಯೊಂದಿಗೆ ಜವಳಿ ಚಟುವಟಿಕೆಗಳಾದ ವೀವಿಂಗ್(ನೇಯ್ಗೆ), ಸೈಜಿಂಗ್, ವಾರ್ಪಿಂಗ್ ಮತ್ತು ಗಾರ್ಮೆಂಟ್ ಘಟಕಗಳು ಸೇರಿದಂತೆ ಒಟ್ಟು 85 ಘಟಕಗಳು ಸ್ಥಾಪಿಸಲಾಗಿದ್ದು, ಸುಮಾರು 2000 ಜನರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ.<br><br>2) **ಗುಲ್ಬರ್ಗಾ ಟೆಕ್ಸ್ ಟೈಲ್ ಪಾರ್ಕ್(Scheme for integrated Textile Park):**<br>ಈ ಜವಳಿ ಪಾರ್ಕ್ ಅನ್ನು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ನಂದೂರು ಕೆಸರಟಗಿ ಗ್ರಾಮದಲ್ಲಿ 50 ಎಕರೆ ವಿಸ್ತೀರ್ಣದ ಜಾಗವನ್ನು KIADB ಮುಖಾಂತರ ಪಡೆದಿದ್ದು ಕೇಂದ್ರ ಸರ್ಕಾರದಿಂದ ರೂ.4904.00 ಲಕ್ಷಗಳಲ್ಲಿ ಯೋಜನಾ ಮೊತ್ತ ಅನುಮೋದನೆಯಾಗಿರುತ್ತದೆ. ಯೋಜನಾ ಮಾರ್ಗಸೂಚಿಯಂತೆ SPV ಪದಾಧಿಕಾರಿಗಳು ಹಾಗೂ ಸದಸ್ಯರು ಬ್ಯಾಂಕ್‌ನಿಂದ ಸಾಲ ಹಾಗೂ ಸದಸ್ಯರ ವಂತಿಕೆ ಭರಿಸಲು ವಿಫಲರಾಗಿರುವುದರಿಂದ ನಿಗದಿತ ಸಮಯದಲ್ಲಿ ಜವಳಿ ಪಾರ್ಕ್ ಅನುಷ್ಠಾನ ಆಗದಿರುವ ಕಾರಣ ಕೇಂದ್ರ ಸರ್ಕಾರವು ಸದರಿ ಯೋಜನೆಯನ್ನು ರದ್ದುಗೊಳಿಸಿರುತ್ತದೆ.<br><br>3) **ಬೈನರಿ ಅಪೇರೆಲ್ ಪಾರ್ಕ್ ಪ್ರೈ. ಲಿ., ಬಗ್ಗನಾಡು ಗ್ರಾಮ, ಹಿರಿಯೂರು ತಾ॥ ಚಿತ್ರದುರ್ಗ ಜಿಲ್ಲೆ:-**<br>ಈ ಜವಳಿ ಪಾರ್ಕ್ ಅನ್ನು ಖಾಸಗಿ ಒಡೆತನದೊಂದಿಗೆ ರಾಜ್ಯ ಸರ್ಕಾರದ ಜವಳಿ ನೀತಿ ಅಡಿ 25 ಎಕರೆ ವಿಸ್ತೀರ್ಣದಲ್ಲಿ ಮೊದಲ ಹಂತವಾಗಿ, ಒಟ್ಟು ಯೋಜನಾ ಮೊತ್ತ ರೂ.2824.94 ಲಕ್ಷಗಳಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. ಪ್ರಸ್ತುತ ಘಟಕದಲ್ಲಿ |